ವಿಷಯ : ಶಿಡ್ಲಘಟ್ಟದಲ್ಲಿ ವಿಜ್ಞಾನ ಕಾಲೇಜನ್ನು ಪ್ರಾರಂಭಿಸುವುದು.

ಪ್ರಶ್ನೆ ಸಂಖ್ಯೆ 696 (1420) ಶ್ರೀ ವಿ. ಮುನಿಯಪ್ಪ (ಶಿಡ್ಲಘಟ್ಟ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

(ಅ) ಶಿಡ್ಲಘಟ್ಟದಲ್ಲಿ ವಿಜ್ಞಾನ ಕಾಲೇಜನ್ನು ಸ್ಥಾಪಿಸುವ ವಿಷಯ ಸರ್ಕಾರದವರ ಗಮನದಲ್ಲಿದೆಯೇ ;

(ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

(ಅ) ಸಧ್ಯದಲ್ಲಿ ಅಂಥರ ಪ್ರಸ್ತಾವನೆ ಇಲ್ಲ.

(ಆ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ನಾಗರೆಡ್ಡಿ ಲಚಮರೆಡ್ಡಿ ಪಾಟೀಲ.— ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕ ಉತ್ತರದಿಂದ ಎರಡು ತಾಲ್ಲೂಕಿನ ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿದೆ ಎನ್ನುವುದು ಗೊತ್ತಾಗುತ್ತದೆ. ಕೇವಲ 10-15 ಪರ್ಸೆಂಟ್ ಮಾತ್ರ ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಪ್ರವೇಶ ಸಿಗುತ್ತಿದೆ. 1981-82, 1982-83 ಮತ್ತು 1983-84ರಲ್ಲಿ ಗುಲ್ಬರ್ಗದಲ್ಲಿರುವ ಎಚ್. ಕೆ. ಇ. ಎಜುಕೇಶನ್ ಸಂಸ್ಥೆಯ ಇಂಜಿನಿಯರಿಂಗ್ ಕಾಲೇಜಿನಲ್ಲಿ ಎಷ್ಟೆಷ್ಟು ಸೀಟುಗಳನ್ನು ಕೊಟ್ಟಿದ್ದಾರೆಂಬುದನ್ನು ನೋಡಿದಾಗ ಗ್ರಾಮಾಂತರ ಪ್ರದೇಶಗಳಿಂದ ಬಂದಂತಹವರಿಗೆ ಕಡಿಮೆ ಸೀಟುಗಳನ್ನು ಕೊಟ್ಟಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ಗ್ರಾಮಾಂತರ ಪ್ರದೇಶಗಳಿಂದ ಬರತಕ್ಕ ವಿದ್ಯಾರ್ಥಿಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಸೀಟುಗಳು ದೊರೆಯುವಂತೆ ಕ್ರಮ ತೆಗೆದುಕೊಳ್ಳುತ್ತೀರಾ ? ತಾಂತ್ರಿಕ ಕಾಲೇಜುಗಳಲ್ಲಿ ಗ್ರಾಮಾಂತರ ಪ್ರದೇಶಗಳಿಂದ ಬರತಕ್ಕ ವಿದ್ಯಾರ್ಥಿಗಳಿಗೆ ಹೆಚ್ಚಿನ ರೀತಿಯಲ್ಲಿ ಅವಕಾಶ ಮಾಡುವುದಕ್ಕೆ ಸರ್ಕಾರ ಯಾವ ರೀತಿ ಕ್ರಮ ತೆಗೆದುಕೊಳ್ಳುತ್ತದೆ ?

ಶ್ರೀ ಬಿ. ರಾಚಯ್ಯ.— ಮಾನ್ಯ ಅಧ್ಯಕ್ಷರೆ, ಗ್ರಾಮಾಂತರ ಪ್ರದೇಶಗಳಿಂದ ಬರತಕ್ಕ ವಿದ್ಯಾರ್ಥಿಗಳಿಗೆ ಸೀಟು ಸಿಗುವುದು ಬಹಳ ಕಡಿಮೆಯಾಗಿದೆ ಎನ್ನುವುದು ಸರ್ಕಾರಕ್ಕೆ ಮನದಟ್ಟಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಮಾಂತರ ಪ್ರದೇಶಗಳ ವಿದ್ಯಾರ್ಥಿಗಳಿಗೆ ಸೀಟುಗಳನ್ನು ಕೊಡಬೇಕು ಎನ್ನುವುದರ ಬಗ್ಗೆ ಯೋಚನೆ ಮಾಡುತ್ತಿದ್ದೇವೆ. ಗ್ರಾಮಾಂತರ ಪ್ರದೇಶಗಳಿಂದ ಬರತಕ್ಕ ವಿದ್ಯಾರ್ಥಿಗಳಿಗೆ ಹೆಚ್ಚಿನ ರೀತಿಯಲ್ಲಿ ಅವಕಾಶ ಮಾಡಿಕೊಡುವುದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಅಧ್ಯಕ್ಷರು.— ಪ್ರಶ್ನೆ ನಂ. 695 (1459) ಮಾನ್ಯ ಸದಸ್ಯರಾದ ಪ್ರತಾಪಚಂದ್ರಶೆಟ್ಟಿ ಅವರು ಗೈರುಹಾಜರಾಗಿದ್ದಾರೆ.

ಅಧ್ಯಕ್ಷರು.— ಪ್ರಶ್ನೆ ನಂ. 696 (1420) ಮಾನ್ಯ ಸದಸ್ಯರಾದ ಮುನಿಯಪ್ಪನವರು ಗೈರು ಹಾಜರಾಗಿದ್ದಾರೆ.

ಶ್ರೀ ಪಿ. ರಾಮಚಂದ್ರರಾವ್.— ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆ ?

ಅಧ್ಯಕ್ಷರು.— ತಮ್ಮ ಪ್ರಶ್ನೆಯನ್ನು ಡಿಟೈಲ್ಸ್ ಬಂದಿಲ್ಲವೆಂದು ತಡೆಹಿಡಿಯಲಾಗಿದೆ.

11-30 a. m.

ವಿಷಯ : ರಾಷ್ಟ್ರ ಪ್ರಶಸ್ತಿ ಪಡೆದಿರುವ ಅಧ್ಯಾಪಕರುಗಳ ಸೇವಾವಧಿಯನ್ನು ಹೆಚ್ಚಿಸುವುದು.

ಪ್ರ. ಸಂಖ್ಯೆ 697 (1242) ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).— ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

(ಅ) ರಾಜ್ಯದಲ್ಲಿ ರಾಷ್ಟ್ರಪಶಸ್ತಿ ಪಡೆದಿರುವ ಅಧ್ಯಾಪಕರ ಸಂಖ್ಯೆ ಎಷ್ಟು ;

(ಆ) ಇವರುಗಳಿಗೆ ಸೇವೆಯ ಅವಧಿಯನ್ನು 5 ವರ್ಷಗಳು ಹೆಚ್ಚಿಸಬೇಕೆಂದು ಕೇಂದ್ರ ಸರ್ಕಾರದ ಆದೇಶವೇನಾದರೂ ಇದೆಯೇ ;

(ಇ) ಹಾಗಿದ್ದಲ್ಲಿ ಅವರ ಸೇವೆಯನ್ನು ಪಡೆಯಲು ಹಾಗೂ ಅವರಿಗೆ ಸಲ್ಲಿಸಬೇಕಾದ ವಿಶೇಷ ಸೌಲಭ್ಯಗಳನ್ನು ಕೊಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

(ಅ) 129,

ಮಾನ್ಯ ಸದಸ್ಯರು ಹಾಜರಿರಲಿಲ್ಲ.

(ಅ) ತಾ. 26-3-68ರಲ್ಲಿ ಅಂತಹದೊಂದು ಆದೇಶ ಮಾಡಿತ್ತು. ಆದರೆ ತಾ. 14-11-77 ರಲ್ಲಿ ಕೇಂದ್ರ ಸರ್ಕಾರ ತನ್ನ ನಿಲುವನ್ನು ಬದಲಾಯಿಸಿದೆ.

(ಇ) ರಾಷ್ಟ್ರಪ್ರಶಸ್ತಿ ಪಡೆದಿರುವ ಕೆಲವು ಶಿಕ್ಷಕರನ್ನು ಪಠ್ಯಪುಸ್ತಕ ಸಮಿತಿ ಮತ್ತು ಶಿಕ್ಷಕರ ತರ ಬೇತಿ ಸಮಿತಿಯಲ್ಲಿ ನೇಮಿಸಲಾಗಿದೆ ಮತ್ತು ಈ ಕೆಲಸಕ್ಕಾಗಿ ಅವರಿಗೆ ಸಂಭಾವನೆಯನ್ನು ಸಹ ಕೊಡ ಲಾಗಿದೆ. ಇದಲ್ಲದೆ ರಾಷ್ಟ್ರಪ್ರಶಸ್ತಿ ಪಡೆದ ಶಿಕ್ಷಕರುಗಳಿಗೆ ಸಿಗುವ ನಿವೃತ್ತಿ ವೇತನದ ಜೊತೆಗೆ ಗೌರವ ಧನವನ್ನು ಮಂಜೂರು ಮಾಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಬಿ. ಬೈರಪ್ಪಾಜಿ.— ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ದಿನಾಂಕ 26-3-68ರಲ್ಲಿ ಅಂತಹದೊಂದು ಆದೇಶವನ್ನು ಕೇಂದ್ರ ಸರ್ಕಾರ ಮಾಡಿತ್ತು. ಆದರೆ ದಿನಾಂಕ 14-11-77ರಲ್ಲಿ ಆ ಆದೇಶವನ್ನು ಹಿಂದಕ್ಕೆ ತೆಗೆದುಕೊಂಡಿದೆಯೆಂದು ಹೇಳಿದ್ದಾರೆ. ದಯಮಾಡಿ ಮಾನ್ಯ ಮಂತ್ರಿಗಳು ಏತ ಕ್ಕೋಸ್ಕರ ಆ ಆದೇಶವನ್ನು ವಾಪಸ್ಸು ತೆಗೆದುಕೊಳ್ಳಲಾಗಿದೆಯೆಂಬುದನ್ನು ತಿಳಿಸಬೇಕು. ರಾಷ್ಟ್ರ ಪ್ರಶಸ್ತಿ ಪಡೆದಿರತಕ್ಕ 129 ಜನ ಅಧ್ಯಾಪಕರಲ್ಲಿ ಕೆಲವರನ್ನು ಪಠ್ಯಪುಸ್ತಕ ಸಮಿತಿ ಮತ್ತು ಶಿಕ್ಷಕರ ತರ ಬೇತಿ ಸಮಿತಿಯಲ್ಲಿ ಸೇವೆ ಸಲ್ಲಿಸಲು ಅವಕಾಶ ಮಾಡಿಕೊಟ್ಟಿದ್ದೇವೆಂದು ಹೇಳಿದ್ದಾರೆ. 129 ಜನಗಳ ಪೈಕಿ ಇನ್ನೆಷ್ಟು ಜನ ಹಾಗೆಯೇ ಉಳಿದಿದ್ದಾರೆ ? ಉಳಿದವರು ಕೂಡ ದೃಢಕಾಯರಾಗಿದ್ದಾರೆ, ಸೇವೆಸಲ್ಲಿ ಸಲು ಹೆಚ್ಚಿನ ಆಸಕ್ತಿಯನ್ನು ಇಟ್ಟುಕೊಂಡಿದ್ದಾರೆ. ಕೆಲಸ ಮಾಡುವುದಕ್ಕೆ ತಯಾರಾಗಿರುವ ಇಂತಹ ವರಿಗೆ ಯಾವರೀತಿ ಅವಕಾಶ ಒದಗಿಸಿ ಕೊಡುತ್ತೀರಿ? ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಬರೆದು ಅವರ ಸೇವೆ ಯನ್ನು ರಾಜ್ಯಸರ್ಕಾರಕ್ಕೆ ಪಡೆದುಕೊಳ್ಳುವುದಕ್ಕೆ ತಾವು ಪ್ರಯತ್ನ ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.— ರಾಷ್ಟ್ರಪ್ರಶಸ್ತಿ ಪಡೆದಿರತಕ್ಕ ಉಪಾಧ್ಯಾಯರುಗಳ ಪೈಕಿ ಪ್ರಾಥಮಿಕ ಶಾಲಾ ಉಪಾಧ್ಯಾಯರು 13 ಜನರಿದ್ದಾರೆ. ಪ್ರೌಢಶಾಲಾ ಉಪಾಧ್ಯಾಯರು 9 ಜನರಿದ್ದಾರೆ. ಒಟ್ಟು 22 ಜನ ಉಪಾಧ್ಯಾಯರುಗಳಿಗೆ ಮಾಹೆಯಾನ ಸ್ವಲ್ಪ ಹೆಚ್ಚಿನ ಹಣವನ್ನು ಕೊಡಬೇಕೆಂದು ಸರ್ಕಾರ ಪರಿ ಶೀಲನೆ ಮಾಡುತ್ತಿದೆ. ರಾಜ್ಯ ಪ್ರಶಸ್ತಿಯನ್ನು ಪಡೆದಿರತಕ್ಕ 56 ಜನ ಪ್ರಾಥಮಿಕ ಶಾಲಾ ಉಪಾ ಧ್ಯಾಯರುಗಳು ಇದ್ದಾರೆ. 28 ಜನ ಪ್ರೌಢಶಾಲಾ ಉಪಾಧ್ಯಾಯರುಗಳು ಇದ್ದಾರೆ. ಇವರು ಒಟ್ಟು 84 ಜನ ಇದ್ದಾರೆ ಇವರಿಗೆ ಮಾಹೆಯಾನ ಹೆಚ್ಚಿಗೆ ಹಣವನ್ನು ಕೊಡಬೇಕೆಂದು ಸರ್ಕಾರ ಪರಿಶೀಲನೆ ಮಾಡುತ್ತಿದೆ. ಈಗ ಪಠ್ಯಪುಸ್ತಕ ಸಮಿತಿಯಲ್ಲಿ ಕೆಲಸ ಮಾಡತಕ್ಕವರು ಈ ಕೆಳಕಂಡಂತಿದ್ದಾರೆ:

ಶ್ರೀಯುತರಾದ

1. ರಾಮರೆಡ್ಡಿ
2. ಕೆ. ವೆಂಕಟರಾಮಯ್ಯ
3. ಕೆ. ಎಸ್. ಚಂದ್ರಶೇಖರಯ್ಯ
4. ಎ. ಎಸ್. ಹನುಮಂತಾಚಾರ್

ಇವರನ್ನು ಪಠ್ಯಪುಸ್ತಕ ಸಮಿತಿಯಲ್ಲಿ ಕೆಲಸಮಾಡುವುದಕ್ಕೆ ನೇಮಿಸಿಕೊಂಡಿದ್ದೇವೆ. ಇವರ ಸೇವಾ ಅವಧಿಯನ್ನು ಹೆಚ್ಚಿಸಲಿಕ್ಕೆ ಇದ್ದಂತಹ ಆದೇಶವನ್ನು ಕೇಂದ್ರ ಸರ್ಕಾರ 1977ರಲ್ಲಿ ವಾಪಸ್ಸು ತೆಗೆದು ಕೊಂಡಿದೆ. ನಾವು ನಮ್ಮ ರಾಜ್ಯದಲ್ಲಿ ಅವರಿಗೆ ಗೌರವ ಧನವನ್ನು ಕೊಡಬೇಕು, ಅವರನ್ನು ಉಪ ಯೋಗಿಸಿಕೊಳ್ಳಬೇಕೆಂದು ಚಿಂತನೆ ಮಾಡುತ್ತಿದ್ದೇವೆಂದು ನನ್ನ ಉತ್ತರದಲ್ಲಿ ಹೇಳಿದ್ದೇನೆ.

ವಿಷಯ : ಧಾರವಾಡದಲ್ಲಿರುವ ಶಾರೀರಕ ತರಬೇತಿ ಶಿಕ್ಷಕರಿಂದ ಅನ್ನ ಸತ್ಯಾಗ್ರಹ.

ಪ್ರ. ಸಂಖ್ಯೆ 699 (1328) ಮಾನ್ಯ ಶಿಕ್ಷಣ ಶ್ರೀ ಎಂ. ಜಿ. ಜರತಾರಗರ್ (ಹುಬ್ಬಳ್ಳಿ).— ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

(ಅ) ಧಾರವಾಡ ಜಿಲ್ಲೆಯ ಉಪ ನಿರ್ದೇಶಕರ ಕಛೇರಿಯ ಮುಂದೆ ಶಾರೀರಿಕ ಶಿಕ್ಷಕರು ಅನ್ನ ಸತ್ಯಾಗ್ರಹ ಮಾಡುತ್ತಿರುವುದು ಹಾಗೂ ಖಾಸಗೀ ಶಿಕ್ಷಕರ ಹೋರಾಟ ಸಮಿತಿಯವರು 1984ನೇ ಇಸವಿ ಮಾರ್ಚ್ 1ರಿಂದ ಅನ್ನ ಸತ್ಯಾಗ್ರಹ ಕೈಕೊಳ್ಳುವುದಾಗಿ ತಿಳಿಸಿರುವುದು ನಿಜವೇ ;

(ಆ) ಹಾಗಿದ್ದಲ್ಲಿ ಮೇಲ್ಕಂಡ ಸತ್ಯಾಗ್ರಹಗಳಿಗೆ ಕಾರಣಗಳೇನು ;

(ಇ) ಶಾರೀರಿಕ ಶಿಕ್ಷಕರ ಹಾಗೂ ಖಾಸಗಿ ಶಿಕ್ಷಕರ ವೇತನ ಶ್ರೇಣಿಯಲ್ಲಿ ವ್ಯತ್ಯಾಸವಿರುವುದು ನಿಜವೇ ;

(ಈ) ಮೇಲ್ಕಂಡ ಶಿಕ್ಷಕರ ವೇತನ ಶ್ರೇಣಿಯಲ್ಲಿರುವ ತಾರತಮ್ಯವನ್ನು ಸರಿಪಡಿಸುವ ಬಗ್ಗೆ ಸರ್ಕಾರ ದವರನ್ನು ನಿರ್ಣಯದ ಮೂಲಕ ಒತ್ತಾಯಪಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಹಾಗಿದ್ದಲ್ಲಿ, ಸರ್ಕಾರದವರು ಈ ಬಗ್ಗೆ ಕೈಗೊಂಡ ಕ್ರಮವೇನು ?